## ಆಸ್ಟ್ರೇಲಿಯಾದಲ್ಲಿ ಪಾರ್ವತಿ



ಹುಬ್ಬಳ್ಳಿಯಿಂದ ಬೆಂಗಳೂರಿಗೆ ಮೊದಲಬಾರಿಗೆ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದೆವು. ಸೋದರತ್ತೆಯ ಮೊಮ್ಮಗ ಉತ್ಸುಕತೆಯಿಂದ ಪ್ರಶ್ನೆಗಳನ್ನು ಕೇಳುತ್ತ ಕುಳಿತಿದ್ದ. ಚೂಟಿಯಾಗಿದ್ದ ನಾಲ್ಕು ವರ್ಷದ ತುಂಟ ಪೋರನನ್ನು ಕಂಡ ಗಗನಸಖಿ, ವಾಟ್ ಈಸ್ ಯುರ್ ನೇಮ್? (ನಿನ್ನ ಹೆಸರೇನು?) ಎಂದು ಕೇಳಿದಳು. 'ಶಿವ' ಎಂದ ಆತ. ಅವಳು ನಸುನಗುತ್ತಾ, 'ವೇರ್ ಈಸ್ ಪಾರ್ವತಿ?' (ಪಾರ್ವತಿ ಎಲ್ಲಿದ್ದಾಳೆ?) ಎಂದಳು. ಆತ ತಕ್ಷಣವೇ, 'ಶೀ ಈಸ್ ಇನ್ ಆಸ್ಟ್ರೇಲಿಯಾ' (ಅವಳು ಆಸ್ಟ್ರೇಲಿಯಾದಲ್ಲಿದ್ದಾಳೆ) ಎಂದ. ಅವಳು ಚಕಿತಳಾಗಿ ನಮ್ಮೆಡೆಗೆ ನೋಡಿದಾಗ, ನಮ್ಮ ಮಗಳು ಪಾರ್ವತಿ ಹೆಚ್ಚಿನ ಓದಿಗಾಗಿ ಆಸ್ಟ್ರೇಲಿಯಾಗೆ ಹೋಗಿದ್ದಾಳೆಂದು ಹೇಳಿದೆವು. ಅವಳು ನಗುತ್ತ ಶಿವನಿಗೊಂದು ಹೂ ಮುತ್ತನಿತ್ತು ಮುಂದೆ ಸಾಗಿದಳು.

**ಇಂದಿರಾ ಮೋಟೆಬೆನ್ನೂರ**

---

## ಸೊಳ್ಳೆಕಾಟ

ಬೆಂಗಳೂರಿನಿಂದ ಭದ್ರಾವತಿಗೆ ಹೊರಡಲು ರೈಲಿನಲ್ಲಿ ಕುಳಿತಿದ್ದೆ. ರೈಲಿನಲ್ಲಿ ಸೊಳ್ಳೆಗಳ ಕಾಟ ಹೆಚ್ಚಿದ್ದರಿಂದ ಒಬ್ಬಳೇ ಗೊಣಗುತ್ತಿದ್ದೆ. ಎದುರಿಗೆ ಕುಳಿತಿದ್ದ ಅಜ್ಜಿಯೂ ಒಬ್ಬರೇ ಇದ್ದಿದ್ದರಿಂದ ನನ್ನೊಂದಿಗೆ ಮಾತು ಆರಂಭಿಸಲು ಹವಣಿಸುತ್ತಿದ್ದರು. ಅಷ್ಟರಲ್ಲಿ ನನ್ನ ಪತಿಯ ಫೋನ್ ಬಂತು. ಅವರಿಗೆ ಉತ್ತರಿಸಿ ಫೋನ್ ಇಡುವುದೇ ತಡ ಅಜ್ಜಿ, 'ಏನಮ್ಮಾ, ಇಷ್ಟು ಸಣ್ಣ ವಿಚಾರವನ್ನೆಲ್ಲಾ ಪಾಪ ಗಂಡನಿಗೆ ಹೇಳಿ ಯಾಕೆ ಅವರಿಗೆ ಕಿರಿಕಿರಿ ಕೊಡಬೇಕು?' ಎಂದರು. ನಮ್ಮ ಮನೆಮಾತು ಕೊಂಕಣಿಯಲ್ಲಿ ನನ್ನ ಪತಿ, 'ರೈಲ್ ಬೆಂಗಳೂರ್ ಸೊಳ್ಳೆವೇ' (ರೈಲು ಬೆಂಗಳೂರು ಬಿಟ್ಟಿತಾ?) ಎಂದು ಕೇಳಿದ್ದರು. ಅದಕ್ಕೆ ನಾನು, 'ಹಾ, ಸೊಳ್ಳೆ ಸೊಳ್ಳೆ' (ಹಾ, ಬಿಟ್ಟಿತು ಬಿಟ್ಟಿತು) ಎಂದು ಉತ್ತರಿಸಿದ್ದೆ. ಅದನ್ನ ಅಜ್ಜಿ ಕನ್ನಡದ ಸೊಳ್ಳೆ ಅಂದುಕೊಂಡಿದ್ದರು.



**ಜಯಮಾಲ ಎನ್. ಪೈ**

ಕಲೆ: ಗಣೇಶ ಆಚಾರ್ಯ